# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 568 |
| **ಸದಸ್ಯರ ಹೆಸರು** | : | ಶ್ರೀ ವಿಜಯ ಸಿಂಗ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸುವ ದಿನಾಂಕ** | : | 11.12.2020 |
| **ಉತ್ತರಿಸುವವರು** | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೀದರ್ ಜಿಲ್ಲೆಯಲ್ಲಿರುವ ಅಪೌಷ್ಠಿಕ ಮಕ್ಕಳ ಸಂಖ್ಯೆಯೆಷ್ಟು; (ತಾಲ್ಲೂಕುವಾರು ವಿವರ ನೀಡುವುದು) ಅಪೌಷ್ಠಿಕತೆ ಹೋಗಲಾಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;</td><td>ಬೀದರ್ ಜಿಲ್ಲೆಯಲ್ಲಿ 61 ಮಕ್ಕಳು ಅಪೌಷ್ಠಿಕತೆಯಿಂದ ಬಳಲುತ್ತಿದ್ದಾರೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ತಾಲ್ಲೂಕು</th><th>ಅಪೌಷ್ಠಿಕ ಮಕ್ಕಳ ಸಂಖ್ಯೆ</th></tr>
<tr><td>1</td><td>ಬೀದರ್</td><td>31</td></tr>
<tr><td>2</td><td>ಭಾಲ್ಕಿ</td><td>02</td></tr>
<tr><td>3</td><td>ಹುಮ್ನಾಬಾದ್</td><td>05</td></tr>
<tr><td>4</td><td>ಔರಾದ್</td><td>13</td></tr>
<tr><td>5</td><td>ಬಸವಕಲ್ಯಾಣ</td><td>10</td></tr>
<tr><td colspan="2">ಒಟ್ಟು</td><td>61</td></tr>
</table>
ಅಪೌಷ್ಠಿಕತೆ ಹೋಗಲಾಡಿಸಲು ಸರ್ಕಾರವು ಈ ಕೆಳಕಂಡಂತೆ ಕ್ರಮ ಕೈಗೊಂಡಿದೆ.<br>
ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಪೂರಕ ಪೌಷ್ಠಿಕ ಆಹಾರವನ್ನು ಸಾಮಾನ್ಯ ಮಕ್ಕಳಿಗೆ ಪ್ರತಿ ದಿನ ಘಟಕ ವೆಚ್ಚ ರೂ.8.00ರಂತೆ ಹಾಗೂ ತೀವ್ರ ಅಪೌಷ್ಠಿಕತೆಯುಳ್ಳ ಮಕ್ಕಳಿಗೆ ಘಟಕ ವೆಚ್ಚ ರೂ.12.00ರಂತೆ ನೀಡಲಾಗುತ್ತಿದೆ.
<ul>
<li>3ರಿಂದ 6ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆ ನೀಡಲಾಗುತ್ತಿದೆ.</li>
<li>6 ತಿಂಗಳಿಂದ 6 ವರ್ಷದ ಮಕ್ಕಳಿಗೆ ವಾರದಲ್ಲಿ 5 ದಿನ 150 ಎಂ.ಎಲ್ ಕೆನೆಭರಿತ ಹಾಲು ನೀಡಲಾಗುತ್ತಿದೆ.</li>
<li>ಅತಿಕಡಿಮೆ ತೂಕವುಳ್ಳ ಮಕ್ಕಳಿಗೆ ಹೆಚ್ಚುವರಿ ವಾರದಲ್ಲಿ 3 ದಿನ ಮೊಟ್ಟೆ 200 ಎಂ.ಎಲ್ ಹಾಲು ಹಾಗೂ ಮೊಟ್ಟೆ ಉಪಯೋಗಿಸದ ಮಕ್ಕಳಿಗೆ ವಾರದಲ್ಲಿ 200 ಎಂ.ಎಲ್ ಕೆನೆಭರಿತ ಹಾಲನ್ನು ನೀಡಲಾಗುತ್ತದೆ.</li>
<li>ಹಿಂದುಳಿದ 5 ಜಿಲ್ಲೆಗಳಾದ ಕಲ್ಬುರ್ಗಿ, ಬೀದರ್, ರಾಯಚೂರು, ಕೊಪ್ಪಳ ಹಾಗೂ ಯಾದಗಿರಿ ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ಹೆಚ್ಚುವರಿ ವಾರದಲ್ಲಿ 3 ದಿನ ಮೊಟ್ಟೆ 200 ಎಂ.ಎಲ್. ಕೆನೆಭರಿತ ಹಾಲನ್ನು ನೀಡಲಾಗುತ್ತದೆ. ಹಾಗೂ ಚಿಕಿತ್ಸಾ ಆಹಾರಕ್ಕಾಗಿ (Therapeutric food)</li>
</ul></td></tr>
</table>

| | | |
|---|---|---|
| | | ಪ್ರತಿ ಮಗುವಿಗೆ ವಾರ್ಷಿಕ ರೂ.2000/- ಗಳಂತೆ ವೆಚ್ಚ ಭರಿಸಲಾಗುತ್ತಿದೆ.<br>• ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಪೌಷ್ಠಿಕ ಪುನರ್ವಸತಿ ಕೇಂದ್ರ (NRC)ಗಳಲ್ಲಿ ಅಪೌಷ್ಠಿಕ ಮಕ್ಕಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. |
| ಆ. | ಬೀದರ್ ಜಿಲ್ಲೆಯಲ್ಲಿರುವ ಸಾಂತ್ವನ ಕೇಂದ್ರಗಳ ಸಂಖ್ಯೆ ಎಷ್ಟು; 2016 ರಿಂದ ಇಲ್ಲಿಯವರೆಗೆ ಸಾಂತ್ವನ ಕೇಂದ್ರಕ್ಕೆ ನೀಡಿದ ಅನುದಾನವೆಷ್ಟು (ವಿವರ ನೀಡುವುದು) | ಬೀದರ್ ಜಿಲ್ಲೆಯಲ್ಲಿರುವ ಸಾಂತ್ವನ ಕೇಂದ್ರಗಳ ಸಂಖ್ಯೆ: 05.<br>2016-17ನೇ ಸಾಲಿನಿಂದ 2019-20ನೇ ಸಾಲಿನವರೆಗೆ ಸಾಂತ್ವನ ಕೇಂದ್ರಕ್ಕೆ ಬಿಡುಗಡೆ ಮಾಡಿದ ಅನುದಾನದ ವಿವರ ಕೆಳಕಂಡಂತಿದೆ:<br><br>**ವರ್ಷ** — **ಬಿಡುಗಡೆ ಮಾಡಿದ ಅನುದಾನ(ರೂಲಕ್ಷಗಳಲ್ಲಿ)**<br>2016-17 — 19.25<br>2017-18 — 20.50<br>2018-19 — 20.90<br>2019-20 — 36.00 |
| ಇ. | ಬೀದರ್ ಜಿಲ್ಲೆಯಲ್ಲಿರುವ ವಿಕಲಚೇತನರ ಸಂಖ್ಯೆ ಎಷ್ಟು;(ತಾಲ್ಲೂಕುವಾರು ಮಾಹಿತಿ ನೀಡುವುದು) | ಬೀದರ್ ಜಿಲ್ಲೆಯ ತಾಲ್ಲೂಕುವಾರು ವಿಕಲಚೇತನರ ಮಾಹಿತಿಯು ಈ ಕೆಳಕಂಡಂತಿದೆ:<br><br>ಕ್ರ ಸಂ. — ತಾಲ್ಲೂಕು ಹೆಸರು — ವಿಕಲಚೇತನರ ಸಂಖ್ಯೆ<br>**1** — ಬೀದರ್ ಉತ್ತರ — 8185<br>**2** — ಭಾಲ್ಕಿ — 6213<br>**3** — ಹುಮನಾಬಾದ — 6789<br>**4** — ಔರಾದ — 7232<br>**5** — ಬಸವಕಲ್ಯಾಣ — 8316<br>**ಒಟ್ಟು** — **36645** |
| ಈ | ವಿಕಲಚೇತನ ಪರಿಹಾರ ಪಡೆಯಲು 2018 ರಿಂದ 2020 ರವರೆಗೆ ಎಷ್ಟು ಅರ್ಜಿಗಳು ಬಂದಿವೆ; ಈ ಪೈಕಿ ಇನ್ನೂಎಷ್ಟು ಅರ್ಜಿಗಳು ಪರಿಶೀಲನೆಯಲ್ಲಿವೆ ? (ವಿವರ ನೀಡುವುದು) | 2018 ರಿಂದ 2020ರವರೆಗೂ ವಿಕಲಚೇತನರ ಪುನರ್ವಸತಿ ಕಾರ್ಯಕರ್ತರ ಮರಣ ಪರಿಹಾರ ಯೋಜನೆಯಡಿ 03 ಅರ್ಜಿಗಳು ಸ್ವೀಕೃತವಾಗಿದ್ದು, ಸದರಿ 03 ಅರ್ಜಿಗಳಿಗೆ ಮರಣ ಪರಿಹಾರವನ್ನು ಒದಗಿಸಲಾಗಿದೆ. |

**(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತುವಿಕಲಚೇತನರ,
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ: ಮಮಇ 234 ಐಸಿಡಿ 2020